ವಿಷಯ:- ಸಾರಿಗೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ.

1435 (2044) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರಿಗೆ ಇಲಾಖೆಯಲ್ಲಿರುವ ಯಾವ ಯಾವ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವ ಅವಕಾಶವಿದೆಯೇ?

ಆ) ಸಧ್ಯ ಯಾವ ಯಾವ ಶ್ರೇಣಿಯ ಹುದ್ದೆಗಳು ಖಾಲಿ ಇವೆ? ಅವುಗಳ ಸಂಖ್ಯೆ ಎಷ್ಟು?

ಇ) ಈ ಹುದ್ದೆಗಳು ಖಾಲಿಯಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಬರಬಹುದಾಗಿದ್ದ ಆದಾಯ ತಪ್ಪಿದಂತಾಗಿಲ್ಲವೆ? ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಸಾರಿಗೆ ಇಲಾಖೆಯಲ್ಲಿ ಕೆಳಕಂಡ ಹುದ್ದೆಗಳಿಗೆ ನೇರ ನೇಮಕಾತಿ ಅವಕಾಶವಿದೆ.

1) ಪ್ರಾದೇಶಿಕ ಸಾರಿಗೆ ಅಧಿಕಾರಿ (2) ಕಾನೂನು ಅಧಿಕಾರಿ (3) ಸಹಾಯಕ ಕಾನೂನು ಅಧಿಕಾರಿ (4) ಮೋಟಾರು ವಾಹನ ನಿರೀಕ್ಷಕರು (5) ಪ್ರಥಮ ದರ್ಜೆ ಸಹಾಯಕರು (6) ದ್ವಿತೀಯ ದರ್ಜೆ ಸಹಾಯಕರು (7) ಅಭಿಯೋಜನಾ ನಿರೀಕ್ಷಕರು (8) ಶೀಘ್ರಲಿಪಿಗಾರರು (9) ಬೆರಳಚ್ಚುಗಾರರು (10) ಚಾಲಕರು (11) 'ಡಿ' ದರ್ಜೆ ನೌಕರರು.

ಆ) 1)	ಉಪ ಸಾರಿಗೆ ಆಯುಕ್ತರು	–	03
2)	ಪ್ರಾದೇಶಿಕ ಸಾರಿಗೆ ಅಧಿಕಾರಿ	–	06
3)	ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	–	02
4)	ಕಾನೂನು ಅಧಿಕಾರಿ	–	01
5)	ಖಜಾನೆ : ತೆರಿಗೆ ಅಧಿಕಾರಿ : ಸಹಾಯಕ ಕಾರ್ಯದರ್ಶಿ	–	15
6)	ಹಿರಿಯ ಮೋಟಾರು ವಾಹನ ನಿರೀಕ್ಷಕರು	–	22
7)	ಅಧೀಕ್ಷಕರು	–	03
8)	ಪ್ರಥಮ ದರ್ಜೆ ಸಹಾಯಕರು	–	80
9)	ದ್ವಿತೀಯ ದರ್ಜೆ ಸಹಾಯಕರು	–	16
10)	ಅಭಿಯೋಜನಾಧಿಕಾರಿ	–	08
11)	ಅಭಿಯೋಜನಾ ನಿರೀಕ್ಷಕರು	–	14
12)	ಮೋಟಾರು ವಾಹನ ನಿರೀಕ್ಷಕರು	–	70
13)	ಶೀಘ್ರಲಿಪಿಗಾರರು	–	10
14)	ಬೆರಳಚ್ಚುಗಾರರು	–	07
15)	ಚಾಲಕರು	–	19

16)	'ಡಿ' ದರ್ಜಿ ನೌಕರರು	–	74
17)	ಕಂಪ್ಯೂಟರ್ ಹುದ್ದೆಗಳು	–	11
		ಒಟ್ಟು	361

ಇ) ಹುದ್ದೆಗಳು ಖಾಲಿಯಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯ ತಪ್ಪಿದಂತಾಗುವುದಿಲ್ಲ.

1) ಪ್ರಥಮ ದರ್ಜಿ ಸಹಾಯಕರು, ದ್ವಿತೀಯ ದರ್ಜಿ ಸಹಾಯಕರು, ಬೆರಳಚ್ಚುಗಾರರು ಮತ್ತು 'ಡಿ' ಗುಂಪಿನ ನೌಕರರ ಹುದ್ದೆಗಳನ್ನು ಇತ್ತೀಚೆಗೆ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಮೂಲಕ ತುಂಬಲಾಗುತ್ತಿದೆ.

2) ಕರ್ನಾಟಕ ಲೋಕಸೇವಾ ಆಯೋಗದಿಂದ ತುಂಬಬೇಕಾಗಿರುವ ಹುದ್ದೆಗಳ ಬಗ್ಗೆ ಆಯೋಗಕ್ಕೆ ಬರೆಯಲಾಗಿದೆ.

3) ಬಡ್ತಿಯಿಂದ ತುಂಬಬೇಕಾದ ಅಧಿಕಾರಿಗಳ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉಪಾಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

(4) ವರದಿಯನ್ನು ಒಪ್ಪಿಸುವುದು (ಅಧ್ಯಕ್ಷರು, ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ):-

ಡಾ।। ಎಂ.ಪಿ. ಕರ್ಕಿ:- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹತ್ತೊಂಬತ್ತನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು:- ವರದಿಯನ್ನು ಮಂಡಿಸಲಾಗಿದೆ.

ನಿಲುವಳಿ ಸೂಚನೆ ಮಂಡನೆ (ಅನುಮತಿ ಕೋರಿ)

ವಿಷಯ:- ಕೋಲಾರ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕೃಷಿ ಸಚಿವರು ಸರ್ಕಾರಿ ನೌಕರರಿಗೆ ಹೊಡೆದರೆಂಬ ವರದಿ ಬಗ್ಗೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಎಂದು ಕೊಟ್ಟಿದ್ದೇನೆ. ತಾವುಗಳು ಅದನ್ನು ಯಾವರೀತಿಯಲ್ಲಿ ಟ್ರೀಟ್ ಮಾಡುತ್ತೀರೋ ಹಾಗೆ ಮಾಡಿ. ನನ್ನ ಆಡ್ಡಿ ಇಲ್ಲ. ನಾನು ಈ ವಿಚಾರವನ್ನು ಯಾವುದೇ ಒಂದು ದುರುದ್ದೇಶದಿಂದ ಪ್ರಸ್ತಾಪ ಮಾಡುತ್ತಾ ಇಲ್ಲ. ಮೊನ್ನೆ ಕೋಲಾರ ಜಿಲ್ಲಾಪರಿಷತ್‌ನಲ್ಲಿ 3ನೇ ತಾರೀಖು ಮಾನ್ಯ ಕೃಷಿ ಸಚಿವರು ಜಿಲ್ಲಾಪರಿಷತ್ ಕಛೇರಿಗೆ 3–30 ಗಂಟೆಗೆ ಸರ್‌ಪ್ರೈಸ್ ವಿಸಿಟ್‌ನ್ನು ಕೊಟ್ಟು ಅಲ್ಲಿನ ಸಿಬ್ಬಂಧಿಗಳ ಬಗ್ಗೆ ಅವರ ಅಟೆಂಡೆನ್ಸ್ ಚೆಕ್ ಮಾಡಬೇಕು, ಅವರುಗಳು ಕಛೇರಿಗೆ ಸರಿಯಾಗಿ ಬರುತ್ತಿದ್ದಾರೋ ಅಥವ ಇಲ್ಲವೋ ಎಂದು ಹೇಳಿ ಅಲ್ಲಿರತಕ್ಕಂಥ ಡೆಪ್ಯುಟಿ ಸೆಕ್ರೆಟರಿ